## ತುಳುನಾಡಿನ ಆಹಾರ, ಐತಿಹಾಸಿಕ ಪರಂಪರೆ ಮಾಹಿತಿಯುಳ್ಳ ಸಾಫ್ಟ್‌ವೇರ್ ಅಭಿವೃದ್ಧಿ

# ಎನ್‌ಐಟಿಕೆ ತಂಡದಿಂದ 'ಸೊಲ್ಮೆಲು' ಆ್ಯಪ್

**ಸುರತ್ಕಲ್:** ರಾಜ್ಯದ ದಕ್ಷಿಣ ಕನ್ನಡ ಮತ್ತು ಉಡುಪಿ ಪ್ರದೇಶಗಳು ಪ್ರತಿ ವರ್ಷ ಲಕ್ಷಾಂತರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರವಾಸಿಗರು ಭೇಟಿ ನೀಡುತ್ತಿದ್ದು , ತುಳುನಾಡಿನ ರೆಸಿಪಿ ಹಾಗೂ ಪರಂಪರೆಯನ್ನು ಪ್ರಸ್ತುತ ಪಡಿಸಿ ಅದರತ್ತಾ ಗಮನ ಸೆಳೆಯಲು ಇದೀಗ ಹೊಸ ಸೊಲ್ಮೆಲು ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಲಾಗಿದೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಸುರತ್ಕಲ್ ಇದರ ವಿದ್ಯಾರ್ಥಿಗಳು ಅಭಿವೃದ್ಧಿಗೆ ರೋಬೋ ಸಾಫ್ಟ್ ಟೆಕ್ನಾಲಜೀಸ್ ಜಂಟಿಯಾಗಿ ಸಹಕಾರ ನೀಡಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಪ್ರದೇಶಗಳು ಯಕ್ಷಗಾನ, ಹುಲಿವೇಷ, ನಾಗಮಂಡಲ, ಕಂಬಳ ಮತ್ತು ಭೂತಾರಾಧನೆಯಿಂದ ಹಿಡಿದು ತಮ್ಮ ವಿಶಿಷ್ಟ ಕಲೆ ಮತ್ತು ಕರಕುಶಲ ಕಲೆಗಳ ಪರಿಚಯ ಇದರಲ್ಲಿದೆ. ವಿಶೇಷ ತಿಂಡಿ ತಿನಸುಗಳಾದ ಗೋಳಿ ಬಜೆ, ಪತ್ರೊಡೆ, ನೀರ್ ದೋಸೆ, ಮಂಗಳೂರು ಬನ್ಸ್, ಮಂಗಳೂರು ಮೀನು ಕರಿ, ಕಡುಬು, ಮೀನ್ ಊಟ, ಗಂಜಿ ಊಟ ಮತ್ತು ಇತರ ವಿಶಿಷ್ಟವಾದ ಸ್ಥಳೀಯ ಪಾಕಪದ್ಧತಿಗಳ ಪರಿಚಯವನ್ನು ಸೊಲ್ಮೆಲು ಮಾಡಿಸಲಿದೆ. ಭವಿಷ್ಯದಲ್ಲಿ ಹೋಟೆಲು ಉದ್ಯಮ , ಕರಕುಳಸ ವಸ್ತು ಮಾರಾಟ ಸಹಿತ ಪ್ರವಾಸೋಧ್ಯಮಕ್ಕೆ ಪೂರಕವಾಗಿ ವೃತ್ತಿ ನಿರತರಿಗೆ ಈ ಸಾಫ್ಟ್ ವೇರ್ ಗಣನೀಯ ನೆರವು ಒದಗಿಸಲಿದೆ ಎಂಬ ವಿಶ್ವಾಸ ವಿದ್ಯಾರ್ಥಿಗಳದ್ದಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಪ್ರದೇಶಗಳಲ್ಲಿನ ಸಾಂಪ್ರದಾಯಿಕ ಕುಶಲಕರ್ಮಿಗಳು, ಅಂಗಡಿಯವರು, ಮಾರಾಟಗಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸೊಲ್ಮೆಲು ವಿನ್ಯಾಸಗೊಳಿಸಲಾಗಿದೆ ಮತ್ತು ಅಭಿವೃದ್ಧಿಪಡಿಸಲಾಗಿದೆ. ಸಾಮಾಜಿಕ ಜಾಲತಾಣ ಬಿಟ್ಟರೆ ಪ್ರವಾಸೋಧ್ಯಮ ಇಲಾಖೆ ಹಾಗೂ ಇತರ ಖಾಸಗೀಯಾಗಿ ಒಂದೇ ವ್ಯವಸ್ಥೆಯಡಿ ತುಳುನಾಡಿನ ವಿಶಿಷ್ಟತೆಯನ್ನು ಪ್ರವಾಸಿಗರಿಗೆ ತಿಳಿಯ ಪಡಿಸಲು ವ್ಯವಸ್ಥೆಯ ಕೊರತೆಯಿತ್ತು. ಈಗ ಆ ಕೊರಗು ದೂರವಾಗಿದೆ.

Hosa Diganta, Date: 29/10/24, p, no - 09